ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚನೆಯನ್ನು ತಂದಿದ್ದೀರಿ. ನಾವು well ನಲ್ಲಿ ಪ್ರತಿಭಟನೆ ಮಾಡುತಿದ್ದೇವೆ. ಸಂತಾಪ ಸೂಚನೆಗೆ ನಾವು ಸಹಕಾರ ಕೊಟ್ಟು Well ನಲ್ಲಿ ಪ್ರತಿಭಟನೆಯನ್ನು ಮುಂದುವರೆಸುತ್ತೇವೆ.

ಅಧ್ಯಕ್ಷರು :– ಈಗ ಸಂತಾಪ ಸೂಚನೆ.

1. ಸಂತಾಪ ಸೂಚನೆ

ರಾಜ್ಯದ ಮಾಜಿ ಸಚಿವರಾಗಿದ್ದ ಎಸ್.ನಂಜಪ್ಪ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಎಸ್.ನಂಜಪ್ಪ ಅವರು ದಿನಾಂಕ 31ನೇ ಅಕ್ಟೋಬರ್ 1935 ರಂದು ಕೆ.ಆರ್.ನಗರ ತಾಲ್ಲೂಕು ಕೊಂಗನಹಳ್ಳಿ ಗ್ರಾಮದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ನ್ಯಾಯವಾದಿ ಮತ್ತು ಕೃಷಿಕರು ಹಾಗೂ ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ದಿವಂಗತರು ಕೆ.ಆರ್.ನಗರದಲ್ಲಿ ರೈತ ಸಂಘವನ್ನು ಸ್ಥಾಪಿಸಿದವರಾಗಿದ್ದರು. ಅಲ್ಲದೆ ಜಯಪ್ರಕಾಶ್ ನಾರಾಯಣರ ಆಂದೋಲನದಲ್ಲಿ ಭಾಗವಹಿಸಿದ್ದರು.

ದಿವಂಗತರು 7 ಮತ್ತು 8ನೇ ವಿಧಾನಸಭೆಗೆ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರಲ್ಲದೆ 10ನೇ ವಿಧಾನಸಭೆಗೆ 1994 ರಲ್ಲಿ ಅದೇ ಕ್ಷೇತ್ರದಿಂದ ಚುನಾಯಿತರಾಗಿ ದಿನಾಂಕ: 17.12.1994 ರಿಂದ 30.05.1996 ರವರೆಗೆ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ಎಸ್.ನಂಜಪ್ಪ ಅವರು ದಿನಾಂಕ: 26.01.2014 ರಂದು ನಿಧನ ಹೊಂದಿರುತ್ತಾರೆ.

ಅಧ್ಯಕ್ಷರು : ಮೃತರ ಗೌರವಾರ್ಥ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು:– ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ಎಸ್. ಐ.ಮಲ್ಲಿಕಾರ್ಜನ ಬಂಡೆಯವರ ಸಾವಿನ ಕುರಿತು ಸಿ.ಬಿ.ಐ.ಗೆ ತನಿಖೆಗೆ ವಹಿಸುವ ಬಗ್ಗೆ

(ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ಹೂಡಿದರು)

ಶ್ರೀ ಕೆ.ಎಂ.ಶಿವಲಿಂಗೇಗೌಡ :– ಮಾನ್ಯ ಅಧ್ಯಕ್ಷರೆ, ನಿಯಮ 60 ರ ಅಡಿಯಲ್ಲಿ ಎತ್ತಿನಹೊಳೆ ಬಗ್ಗೆ ಸದನದಲ್ಲಿ ಚರ್ಚೆ ಮಾಡಬೇಕೆಂದು ಈ ನಿಲುವಳಿ ಸೂಚನೆ ತಂದಿದ್ದೇವೆ.

ಅಧ್ಯಕ್ಷರು:– ಮಾನ್ಯ ಶಿವಲಿಂಗೇಗೌಡರೆ, ಮೊದಲು ಪ್ರಶ್ನೋತ್ತರ ಆಗಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಮಲ್ಲಿಕಾರ್ಜುನ ಬಂಡೆಯವರ ವಿಚಾರವಾಗಿ ಸಾಕಷ್ಟು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅದರಲ್ಲಿ ಮುಖ್ಯವಾಗಿ ಮಲ್ಲಿಕಾರ್ಜುನ ಬಂಡೆಯವರು ಏನು ಮೃತಪಟ್ಟಿದ್ದಾರೆ, ಆ ಸಾವಿನ ಹಿನ್ನಲೆಯಲ್ಲಿ ಸಮಗ್ರವಾದಂತಹ ತನಿಖೆ ಆಗಬೇಕೆಂದು ಅವತ್ತು ನಾವು ಒತ್ತಾಯ ಮಾಡಿದ್ದೆವು. ಅದರಲ್ಲಿ ಪ್ರಮುಖವಾಗಿ . . .

(ಗೊಂದಲ)

ಅಧ್ಯಕ್ಷರು:–ಸಾಕಷ್ಟು ಹೇಳಿದ್ದೀರಿ, ಸಾಕು. ಒತ್ತಾಯವನ್ನೂ ಮಾಡಿದ್ದೀರಿ.